4

# ಬೈಬಲನ್ನು ಒಂದೇ ರೀತಿಯಲ್ಲಿ ನಾವು ಅರ್ಥ ಮಾಡಿಕೊಳ್ಳಬಹುದೋ?

ಇಂದು ಬಹಳ ಕಡಿಮೆ ಬೈಬಲ್ ಅಧ್ಯಯನ ಮಾಡುತ್ತಿರುವುದು ದುಃಖಕರವಾದ ಸಂಗತಿಯಾಗಿರುತ್ತದೆ. ದೇವರ ವಾಕ್ಯವನ್ನು ಹೆಚ್ಚಾದ ಜನರು ಓದುವದಿಲ್ಲ ಮತ್ತು ಅಧ್ಯಯನ ಮಾಡುವದಿಲ್ಲ. (1) ಉದಾಸೀನತೆಯ ಕಾರಣದಿಂದ ಅವರು ಓದುವದಿಲ್ಲ. ಅನೇಕ ಜನರು ಬೈಬಲಿನ ಕಡೆಗೆ ಸಂಪೂರ್ಣವಾಗಿ ಉದಾಸೀನರಾಗಿದ್ದಾರೆ. ಬೈಬಲು ಸತ್ಯವಾಗಿದೆಯೋ ಇಲ್ಲವೋ ಎಂಬುದನ್ನು ಜನರು ಗಮನಿಸುವದಿಲ್ಲ. ಅವರಿಗೆ ಅದರಲ್ಲಿ ಆಸಕ್ತಿಯಿಲ್ಲ. (2) ಇತರರು ಧಾರ್ಮಿಕ ವಿಷಯಗಳ ಬಗ್ಗೆ ಸ್ವಲ್ಪ ವಾಗಿ ಆಸಕ್ತರಾಗಿರುವರು. ಆದರೆ ಅದರ ಮುಖ್ಯತ್ವದ ಬಗ್ಗೆ ಅರ್ಥ ಮಾಡಿಕೊಳ್ಳದೇ ಇರುವದರಿಂದ ಬೈಬಲನ್ನು ಅಧ್ಯಯನ ಮಾಡುವದಿಲ್ಲ. ಆ ರೀತಿಯ ಆಹಾರಕ್ಕಾಗಿ ಅವರು ಎಂದೂ ಅಭಿರುಚಿ ಬೆಳೆಸಿಕೊಂಡಿರುವದಿಲ್ಲ. (3) ದೇವರ ಸತ್ಯದ ಕನ್ನಡಿಯು ಅವರ ಮರೆಯಲ್ಲಿಯ ಸ್ಥಿತಿಯನ್ನು ಪ್ರಕಟಿಸುವದರಿಂದ ಅದರೊಳಗೆ ನೋಡಲು ಬಯಸದ ಜನರಿದ್ದಾರೆ. ಅಲ್ಲಿ ನೋಡುವದನ್ನು ಅವರು ಬಯಸುವದಿಲ್ಲ. (4) ಇನ್ನೊಂದು ರೀತಿಯ ಜನರು ಬೈಬಲನ್ನು ಅಧ್ಯಯನ ಮಾಡುವದಿಲ್ಲ. ಯಾಕಂದರೆ ಅರ್ಥ ಮಾಡಿಕೊಳ್ಳಲಿಕ್ಕಾಗುವದಿಲ್ಲವೆಂಬ ಪ್ರಭಾವಕ್ಕೊಳಗಾಗಿರುತ್ತಾರೆ.

ಬೈಬಲನ್ನು ಅರ್ಥಮಾಡಿಕೊಳ್ಳುವದರ ಬಗ್ಗೆ ನಾವು ಮಾತಾಡುತ್ತಿರುವಾಗ, ಈ ಪಾಠವು ನಾಲ್ಕನೆಯ ಗುಂಪಿನ ಮೇಲೆ ಹೆಚ್ಚಾಗಿ ಕೇಂದ್ರೀಕರಿಸುತ್ತದೆ.

## ನಾವು ಅದನ್ನು ಅರ್ಥ ಮಾಡಿಕೊಳ್ಳಬಹುದೋ?

ಬೈಬಲನ್ನು ಅರ್ಥ ಮಾಡಿಕೊಳ್ಳಲಾಗದು ಎಂಬ ಯೋಚನೆಯು ರೋಮನ್ ಕಥೋಲಿಕ್ ಪಾದ್ರಿಗಳ ಸಂಶೋಧನೆಯಾಗಿದೆ. ಈ ಕಲ್ಪನೆಯು ಜನರ ಸ್ವಾತಂತ್ರ್ಯವನ್ನು ಕಳೆಯಲು ಪಾದ್ರಿಗಳಿಂದ ಸಂಶೋದಿಸಲ್ಪಟ್ಟಿತು. ಪರಿಶುದ್ಧ ಬರಹಗಳು ಸಾಮಾನ್ಯ ಜನರಿಗಾಗಿ ಇರುವದಿಲ್ಲ, ಅವರು ಅಧಿಕೃತ ವ್ಯಾಖ್ಯಾನಕ್ಕಾಗಿ ದೇವಾಲಯಕ್ಕೆ ಬರತಕ್ಕದ್ದು. ಈ ರೀತಿಯಲ್ಲಿ ಅವರು ಸದಸ್ಯರನ್ನು ಸಹಾಯಹೀನರನ್ನಾಗಿ ಮಾಡಿರುವರು.

ಪರಿಶುದ್ಧ ಬರಹಗಳು ಎಲ್ಲಾ ಜನರಿಗಾಗಿ ಇರುವವು, ಕೆಲವೇ ದುರಹಂಕಾರಿ ಅಧಿಕಾರಿಗಳಿಗಲ್ಲ ಎಂದು ಸ್ಪಷ್ಟಪಡಿಸಿವೆ. “ಕ್ರಿಸ್ತನ ವಾಕ್ಯವು ನಿಮ್ಮೊಳಗೆ ಸಮೃದ್ಧಿಯಾಗಿವಾಸಿಸಲಿ” (ಕೊಲೊಸ್ಸೆ 3:16) ಎಂದು ಕ್ರೈಸ್ತರು ಆಜ್ಞಾಪಿಸಲ್ಪಟ್ಟಿದ್ದಾರೆ. “ವಾಕ್ಯದ ಶುದ್ಧ ಹಾಲಿಗಾಗಿ ಬಯಸಿರಿ” ಎಂದು ನಾವು ಪ್ರಬೋಧಿಸಲ್ಪಟ್ಟಿದ್ದೇವೆ (1 ಪೇತ್ರ 2:2). ಪರಿಶುದ್ಧ ಬರಹಗಳು ನಮ್ಮನ್ನು ಉಪದೇಶಿಸುವದಕ್ಕಾಗಿ ಬರೆಯಲ್ಪಟ್ಟಿರುವವೆಂದು

ಪೌಲನು ಹೇಳಿದ್ದಾನೆ (ರೋಮಪುರ 15:4; 1 ಕೊರಿಂಥ 10:11). ತನ್ನ ಪತ್ರಿಕೆಯನ್ನು ಸಹೋದರರೆಲ್ಲರಿಗೂ ಓದಿ ಹೇಳಬೇಕೆಂದು ಅವನು ನಿರ್ದೇಶಿಸಿದನು (1 ಥೆಸಲೋನಿಕ 5:27). ಪರಿಶುದ್ಧ ಬರಹಗಳು ಸಾಮಾನ್ಯ ಜನರಿಗಾಗಿ ಉದ್ದೇಶಿಸಲ್ಪಟ್ಟಿರದಿದ್ದರೆ, ಈ ಹೇಳಿಕೆಗಳ ಅರ್ಥವು ಯಾವುದು? ನಾವು ಗ್ರಹಿಸಲಾರದ್ದನ್ನು ಓದಬೇಕೆಂದು ದೇವರು ನಮಗೆ ಆಜ್ಞಾಪಿಸಿದನೋ? ಹಾಗಿದ್ದರೆ, ಎರಡು ಹೇಳಿಕೆಗಳಲ್ಲಿ ಒಂದು ಸತ್ಯವಾಗಿರತಕ್ಕದ್ದು: ನಾವು ಅರ್ಥ ಮಾಡಿಕೊಳ್ಳುವ ರೀತಿಯಲ್ಲಿ ದೇವರು ಅದನ್ನು ಕೊಡಲಾರನು, ಇಲ್ಲವೇ ಆತನು ಕೊಡುವದಿಲ್ಲ. ಆತನು ತನ್ನ ಬಲವನ್ನು ದೂಷಿಸಲಾರನು ಎಂದು ಹೇಳುವುದು, ಹಾಗೂ ಆತನು ತನ್ನ ಒಳ್ಳೆಯತನವನ್ನು ಅಲ್ಲಗಳೆಯಲಾರನು ಎಂದು ಹೇಳುವುದಾಗಿದೆ. ನಿಶ್ಚಯವಾಗಿಯೂ, ಎಲ್ಲರೂ ಅದನ್ನು ಅರ್ಥ ಮಾಡಿಕೊಳ್ಳಲಾರರು ಎಂಬುದನ್ನು ತಿಳಿದು, ದೇವರು ಒಂದು ಪ್ರಕಟಣೆಯನ್ನು ಕೊಟ್ಟು, ಅದು ಎಲ್ಲಾ ಜನರಿಂದ ಓದಲ್ಪಡಬೇಕೆಂದು ಆಜ್ಞಾಪಿಸಿದನೆಂದು ನಾವು ನಂಬಲಿಕ್ಕಾಗುವದಿಲ್ಲ.

## ಅದನ್ನು ಒಂದೇ ರೀತಿಯಲ್ಲಿ ನಾವು ಅರ್ಥ ಮಾಡಿಕೊಳ್ಳಬಹುದೋ?

ನಾವು ಬೈಬಲನ್ನು ಅರ್ಥಮಾಡಿಕೊಳ್ಳಬಹುದೆಂದು ಹೇಳಿದರೂ ಎಲ್ಲರೂ ಒಂದೇ ರೀತಿಯಲ್ಲಿ ಅದನ್ನು ಅರ್ಥಮಾಡಿಕೊಳ್ಳಲಾರರು ಎಂದು ಒತ್ತಿ ಹೇಳುತ್ತಾರೆ. ಮೊದಲು ನಾವು ಈ ಭಾವನೆಯನ್ನು ಚರ್ಚಿಸಿದ್ದೇವೆ, ಆದರೆ ಅದು ಸುಧಾರಿಸಿದ ರೂಪದಲ್ಲಿದೆ. ಪರಿಶುದ್ಧ ಬರಹಗಳ ಅರ್ಥವನ್ನು ಗ್ರಹಿಸಿಕೊಳ್ಳಲು ನಾವು ಶಕ್ತರಾಗದೇ ಇರುವದನ್ನು ಕುರಿತು ಪಾದ್ರಿಗಳು ಮಾಡಿದ ವಾದವೂ ಇದೇ ಆಗಿದೆ. ನಮ್ಮ ಹಿಂದಿನ ಹೇಳಿಕೆಗಳು ಪುನಃ ಅನ್ವಯವಾಗುತ್ತವೆ: ಒಂದೇ ರೀತಿಯಲ್ಲಿ ನಾವು ಅರ್ಥಮಾಡಿಕೊಳ್ಳುವ ಪ್ರಕಟಣೆಯನ್ನು ದೇವರು ಕೊಟ್ಟಿರದಿದ್ದರೆ, ಆತನು ಹಾಗೆ ಮಾಡಿರಲಾರನು ಇಲ್ಲವೇ ಮಾಡಲಾರನು.

ನಿಶ್ಚಯವಾಗಿಯೂ ಎಲ್ಲರೂ ಅರ್ಥಮಾಡಿಕೊಳ್ಳುವ ಸಂದೇಶವನ್ನು ದೇವರು ಕೊಡಬಲ್ಲನು; ಎಲ್ಲರೂ ಅರ್ಥಮಾಡಿಕೊಂಡರೆ, ಆಗ ಅವರು ಒಂದೇ ರೀತಿಯಲ್ಲಿ ಅರ್ಥ ಮಾಡಿಕೊಳ್ಳಬೇಕು. ಕೆಲವರು ಬೈಬಲನ್ನು ಅಪಾರ್ಥ ಮಾಡಿಕೊಳ್ಳಬಹುದು, ಆದರೆ ಅದು ನಾವು ಭಿನ್ನವಾಗಿ ಅರ್ಥಮಾಡಿಕೊಳ್ಳುತ್ತೇವೆಂದಾಗಿರುವದಿಲ್ಲ.

ನಾವು ಈ ತೀರ್ಮಾನಕ್ಕೆ ಒತ್ತಾಯಿಸಲ್ಪಡುತ್ತೇವೆ: ಒಂದೇ ರೀತಿಯಲ್ಲಿ ನಾವು ಅರ್ಥ ಮಾಡಿಕೊಳ್ಳುವ ಪ್ರಕಟನೆಯನ್ನು ದೇವರು ಕೊಟ್ಟಿರದೇ ಇದ್ದರೆ ನಾವು ಅರ್ಥ ಮಾಡಿಕೊಳ್ಳಬೇಕೆಂದು ಆತನು ಬಯಸಲಿಲ್ಲ. ಆದರೆ ನಾವು ಅರ್ಥ ಮಾಡಿಕೊಳ್ಳಬೇಕೆಂದು ಆತನು ಬಯಸುತ್ತಾನೆ. ತನ್ನ ಜನರು ಒಪ್ಪಂದದಲ್ಲಿರಬೇಕೆಂದು ಆತನು ಬಯಸುತ್ತಾನೆ. ಐಕ್ಯತೆಗಾಗಿ ಹೊಸ ಒಡಂಬಡಿಕೆಯು ಬೇಡಿಕೊಳ್ಳುತ್ತದೆ (ಯೋಹನ 17:21; 1 ಕೊರಿಂಥ 1:10).

ತಿಳುವಳಿಕೆಯ ಐಕ್ಯತೆಯಿಲ್ಲದೆ ಐಕ್ಯತೆಯು ಇರಬಹುದೋ? ಇಲ್ಲ. "ಸಮ್ಮತಿಸದೇ ಇಬ್ಬರು ಜೊತೆಯಾಗಿ ನಡೆಯುವರೋ?" (ಆಮೋಸ 3:3). ಆದುದರಿಂದ ಐಕ್ಯತೆಗಾಗಿ ಬೈಬಲಿನ ಬೇಡಿಕೆಯು, ನಾವು ಬೈಬಲನ್ನು ಓದಬೇಕು ಹಾಗೂ ಅದನ್ನು ಅರ್ಥ ಮಾಡಿಕೊಳ್ಳಬೇಕು. ದೇವರು ನಿರೀಕ್ಷಿಸುತ್ತಾನೆ ಹಾಗೂ ಅದನ್ನು ಒಂದೇ ರೀತಿಯಲ್ಲಿ ಅರ್ಥ ಮಾಡಿಕೊಳ್ಳಬಹುದೆಂದು ಅರ್ಥವಾಗುತ್ತದೆ. ಒಬ್ಬ ಪ್ರಸಂಗಿಯು ದಿನದಿನವೂ ಪೀಠದ ಮೇಲೆ ನಿಂತುಕೊಂಡು ಪ್ರತಿಯೊಂದು ಸಲ ರಕ್ಷಣೆಯ ಭಿನ್ನವಾದ ಯೋಜನೆಯನ್ನು ಪ್ರಸಂಗಿಸುವದನ್ನು ದೇವರು ಒಪ್ಪಿಕೊಳ್ಳುವನೋ? ಒಪ್ಪಿಕೊಳ್ಳದಿದ್ದರೆ,

ಭಿನ್ನವಾದ ಯೋಜನೆಯನ್ನು ಪ್ರಸಂಗಿಸುವದನ್ನು ಆತನು ಹೇಗೆ ಒಪ್ಪಿಕೊಳ್ಳುವನು.

## ಧಾರ್ಮಿಕ ಭಿನ್ನತೆಗಳ ಬಗ್ಗೆ ಏನು?

ನಮ್ಮ ಭಿನ್ನತೆಗಳು ಬೈಬಲನ್ನು ಒಂದೇ ರೀತಿಯಲ್ಲಿ ನೋಡಲಾರೆವು ಎಂಬುದಕ್ಕೆ ರುಜುವಾತಾಗಿದೆಯೆಂದು ಯಾರಾದರೂ ಒತ್ತಿ ಹೇಳಬಹುದು. ಅದು ಹಾಗಿರುವುದೋ? ನಮ್ಮ ಕೆಲವು ಭಿನ್ನತೆಗಳು ಯಾವುವು ಇರುತ್ತವೆ?

ಧಾರ್ಮಿಕ ಜಗತ್ತು ವಿಶ್ವಾಸದ ಪ್ರಮಾಣಗಳ ಮೇಲೆ ವಿಭಾಗವಾಗಿರುತ್ತದೆ. ಯಾವ ವಿಶ್ವಾಸ ಪ್ರಮಾಣಗಳು? ಬೈಬಲ್? ಬೈಬಲು ಒಂದು ವಿಶ್ವಾಸಪ್ರಮಾಣವೆಂಬುದನ್ನು ಯಾರಾದರೂ ಅಕ್ಷೇಪಿಸುವರೋ? ಇಲ್ಲ.

ಕ್ರಿಸ್ತನ ಅನುಯಾಯಿಗಳೆಂದು ಹೇಳಿಕೊಳ್ಳುವ ಜನರು ಸಹ ಹೆಸರುಗಳ ಮೇಲೆ ವಿಭಾಗವಾಗಿರುವರು. ಯಾವ ಹೆಸರುಗಳು? "ಕ್ರೈಸ್ತರು" ಎಂಬ ಹೆಸರೋ? ಇಲ್ಲ. ಬೈಬಲಿನಲ್ಲಿ ಕಂಡುಬರದೇ ಇರುವ ಹೆಸರುಗಳ ಮೇಲೆ ವಿಭಾಗವಿರುವುದು.

ಹಾಗೆಯೇ ಆರಾಧಕರು ಬಾಪ್ತಿಸ್ಮದಲ್ಲಿ ಏನು ಒಳಗೊಂಡಿದೆ ಎಂಬುದರ ಬಗ್ಗೆ ವಿಭಾಗವಾಗಿದ್ದಾರೆ. ... ಕೆಲವರು ಮುಳುಗೇಳಿಸುವಿಕೆಯನ್ನು, ಕೆಲವರು ಚಿಮುಕಿಸುವದನ್ನು ಹಾಗೂ ಇತರರು ಸುರಿಯುವಿಕೆಯನ್ನು ಪ್ರಸಂಗಿಸುತ್ತಾರೆ. ಇವುಗಳಲ್ಲಿ ಯಾವುದರ ಬಗ್ಗೆ ವಿಭಾಗವಾಗಿದ್ದೇವೆ? ಬಾಪ್ತಿಸ್ಮದಲ್ಲಿ ಹೂಣಿಡಲ್ಪಡುವದಕ್ಕೆ ಯಾರಾದರೂ ಆಕ್ಷೇಪಿಸುವರೋ? (ಕೊಲೊಸ್ಸೆ 2:12) ಇಲ್ಲ. ವಿಭಜನೆಯು ದೇವರ ವಾಕ್ಯದಲ್ಲಿ ಬೋಧಿಸಲ್ಪಟ್ಟ ತತ್ವಗಳ ಮೇಲೆ ಅಲ್ಲ ಆದರೆ ಬೈಬಲಿನಲ್ಲಿ ಕಂಡುಬರದೇ ಇರುವ ಆಚರಣೆಗಳ ಮೇಲಿಂದ ಬರುತ್ತದೆ.

## ಮುಕ್ತಾಯ

ಬೈಬಲನ್ನು ಓದಿರಿ ಹಾಗೂ ಅಧ್ಯಯನ ಮಾಡಿರಿ. ನೀವು ಅದನ್ನು "(ನಿಮ್ಮ) ಕಾಲಿಗೆ ದೀಪವೂ (ನಿಮ್ಮ) ದಾರಿಗೆ ಬೆಳಕೂ" ಆಗಿರುವದನ್ನು ಕಂಡುಕೊಳ್ಳುವಿರಿ (ಕೀರ್ತನೆ 119:105). ನೀವು ದೀರ್ಘವಾಗಿ ಅದನ್ನು ಓದಿ ಅಧ್ಯಯನ ಮಾಡುವಂತೆ, ಅದರ ಬೆಳವಣಿಗೆಯ ನಿಮ್ಮ ತಿಳುವಳಿಕೆಯನ್ನು ಹೆಚ್ಚಾಗಿ ಕಂಡುಕೊಳ್ಳುವಿರಿ. "ವಾಕ್ಯದ ಶುದ್ಧ ಹಾಲನ್ನು ಬಯಸಿರಿ" (1 ಪೇತ್ರ 2:2).

ಬೈಬಲು ಸಾಕಾಗಿರುವುದು ಎಂಬದನ್ನು ಸ್ವೀಕರಿಸಿಕೊಳ್ಳಿರಿ. ಅದರೊಂದಿಗೆ ಹಾಗೂ ಅದರೊಂದಿಗೆ ಮಾತ್ರವೇ ತೃಪ್ತರಾಗಿರಿ! ಪರಿಶುದ್ಧ ಬರಹಗಳಲ್ಲಿ ನಮೂಧಿಸದೇ ಇರುವ ಆಚಾರಗಳಲ್ಲಿ ನಿರತರಾಗಬೇಡಿರಿ, ಯಾಕಂದರೆ ಅವು ತಪ್ಪಾಭಿಪ್ರಾಯಗಳಿಗೂ ವಿಭಜನೆಗೂ ಮುಖ್ಯ ಕಾರಣವಾಗಿವೆ. ಬೈಬಲಿನೊಂದಿಗೆ ಸಂತೃಪ್ತರಾಗಿರಿ!

© 2009 Truth for Today